# ಶ್ರೀ ಮಧ್ವಾಚಾರ್ಯರು

ಆಂಗ್ಲಮೂಲ: **ಸ್ವಾಮಿ ತಪಸ್ಯಾನಂದ**

ಕನ್ನಡಕ್ಕೆ: **ಸ್ವಾಮಿ ವೀರೇಶಾನಂದ**

ಭಾಗ ೪



## ಒಬ್ಬ ಚಿಂತಕರಾಗಿ ಶ್ರೀ ಮಧ್ವರು

ಒಬ್ಬ ಚಿಂತಕರಾಗಿ ಮಧ್ವಾಚಾರ್ಯರು ಸ್ವಂತಿಕೆಯನ್ನು ಮತ್ತು ವಿಮರ್ಶಾತ್ಮಕ ಮನೋಭಾವವನ್ನು ಮೆರೆಯುತ್ತಾರೆ. ತಾವು ವ್ಯಾಖ್ಯಾನ ಮಾಡಿದ ಎಲ್ಲ ವೇದಾಂತ ಗ್ರಂಥಗಳಲ್ಲಿಯೂ ಅವರು ತಮ್ಮದೇ ಆದ ವಿನೂತನತೆಯನ್ನು ಕಂಡುಕೊಂಡಿದ್ದಾರೆ. ಎಂದಿಗೂ ಅವರು ಹಿಂದಿನವರು ಹಾಕಿಕೊಟ್ಟ ಮಾರ್ಗವನ್ನು ಮಾತ್ರ ತುಳಿದವರಲ್ಲ. ನೂತನ ಭಾರತೀಯ ವಾಸ್ತವವಾದವು ಆಚಾರ್ಯರಲ್ಲಿ ತನ್ನ ಶಕ್ತಿಯುತ ಪ್ರತಿಪಾದಕರನ್ನು ಕಂಡುಕೊಂಡಿತು. ಅದರ ಜೊತೆಗೆ ಉನ್ನತ ಮಟ್ಟದ ಭಕ್ತಿತತ್ತ್ವ ಮತ್ತು ನಾರಾಯಣ ಆರಾಧನೆಯ ಮತೀಯ ಅಂಶಗಳನ್ನು ತಳಕು ಹಾಕಿದ ಶ್ರೇಯಸ್ಸು ಆಚಾರ್ಯರಿಗೆ ಸಲ್ಲುತ್ತದೆ. ಆ ಮೂಲಕ ಮಧ್ವರು ವಾಸ್ತವವಾದವನ್ನು ಜೀವಂತ ಚಿಂತನೆಯನ್ನಾಗಿ ನೆಲೆಗೊಳಿಸಿದರು. ಇದಕ್ಕೆ ವಿರುದ್ಧವಾಗಿ ನ್ಯಾಯ ಮತ್ತು ಸಾಂಖ್ಯ ಮೊದಲಾದ ವಾಸ್ತವವಾದಗಳು ತಾತ್ತ್ವಿಕ ನೆಲೆಗಟ್ಟಿನಲ್ಲಿ ಮಾತ್ರ ನಿಂತುಬಿಟ್ಟವು. ಅವು ಅನುಷ್ಠಾನಯೋಗ್ಯವಾಗಲಿಲ್ಲ. ತಮ್ಮ ಋಗ್ವೇದ ಮತ್ತು ಮಹಾಭಾರತಗಳ ವಿವರಣೆಗಳಲ್ಲಿ, ಆಧುನಿಕ ಯುಗದಲ್ಲಿ ಈ ಪುಸ್ತಕಗಳ ಅಧ್ಯಯನದ ವಿಧಾನಗಳು ಹೇಗಿರುತ್ತವೆ ಎಂಬುದರ ಬಗ್ಗೆ ಭವಿಷ್ಯದೃಷ್ಟಿ ಅವರಲ್ಲಿ ಇರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ವೇದಗಳನ್ನು ಪೌರಾಣಿಕ, ಮನೋವೈಜ್ಞಾನಿಕ ಮತ್ತು ಆಧ್ಯಾತ್ಮಿಕ ದೃಷ್ಟಿಗಳಿಂದ ಅಧ್ಯಯನ ಮಾಡಬಹುದಾದ ಅಪಾರ ಸಾಧ್ಯತೆಗಳನ್ನು ಅಷ್ಟು ಹಿಂದೆಯೇ ಅವರು ಗುರುತಿಸಿದ್ದರು. ಅವರು ಋಗ್ವೇದದ ಮೂವತ್ತೆರಡು ಸೂಕ್ತಗಳಿಗೆ ಭಾಷ್ಯವನ್ನು ಬರೆದಿದ್ದಾರೆ. ಅದರಲ್ಲಿ ಅವರು ಸಾಯಣ ಭಾಷ್ಯಕ್ಕಿಂತ ಭಿನ್ನವಾದ ವ್ಯಾಖ್ಯಾನವನ್ನು ನೀಡುತ್ತಾರೆ. ಅಲ್ಲದೆ ನಿರುಕ್ತಕಾರರಾದ ಯಾಸ್ಕರಿಗಿಂತ ಮುಂದೆ ಹೋಗಿ, ಆ ಸೂಕ್ತಗಳಿಗೆ ಮನೋವೈಜ್ಞಾನಿಕ ಅರ್ಥವನ್ನು ನೀಡುತ್ತಾರೆ. ಆ ಮೂಲಕ ಅವೆಲ್ಲವೂ ಪರಮ ಪುರುಷೋತ್ತಮ ನಾರಾಯಣನ ಜ್ಞಾನವನ್ನೇ ಪ್ರತಿಪಾದಿಸುತ್ತವೆ ಮತ್ತು ಅವನಲ್ಲಿ ಭಕ್ತಿಸಾಧನೆಯನ್ನೇ ಬೋಧಿಸುತ್ತವೆ ಎಂದು ಸಾಧಿಸಿ ತೋರಿಸುತ್ತಾರೆ. ಆಧುನಿಕ ಕಾಲದಲ್ಲಿ ದಯಾನಂದ ಸರಸ್ವತಿ ಮತ್ತು ಮಹರ್ಷಿ ಅರವಿಂದರು ವೇದಗಳಿಗೆ ನೀಡಿದ ವಿವರಣೆಯನ್ನು ಹೋಲುವ ವ್ಯಾಖ್ಯಾನ ಅವರದು. ಒಬ್ಬ ವಿದ್ವಾಂಸರಾಗಿ ಶ್ರೀ ಮಧ್ವಾಚಾರ್ಯರ ವಿದ್ವತ್ತಿನ ಪರಿಧಿ ಸಾಗರೋಪಮವಾದುದು. ವೇದಗಳು, ಎಲ್ಲ ದರ್ಶನಗಳು, ಪುರಾಣ ಇತಿಹಾಸಗಳು ಇವೆಲ್ಲದರಿಂದಲೂ ಉಕ್ತಿಗಳನ್ನು ಅವರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸುತ್ತಾರೆ. ವಿಮರ್ಶಕರು, ಇತರ ಆಚಾರ್ಯರಂತೆ ಭಿನ್ನರಾಗಿದ್ದಾರೆ ಎಂದು ಹೇಳುತ್ತಾರೆ. ಇವರು ಪುರಾಣಗಳಿಂದಲೇ ಹೆಚ್ಚಾಗಿ ಉಲ್ಲೇಖಿಸುತ್ತಾರೆ ಮತ್ತು ಬೇರೆ ಯಾರಿಗೂ ತಿಳಿಯದ ವೇದಭಾಗಗಳ ಉಕ್ತಿಗಳನ್ನು ಉಲ್ಲೇಖಿಸುತ್ತಾರೆ ಎಂಬ ಟೀಕೆಯನ್ನು ಮಾಡಿದ್ದಾರೆ. ಈ ಟೀಕೆಯು ಆಚಾರ್ಯರ ನಿಜವಾದ ಉದ್ದೇಶವನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಎಂದೇ ಹೇಳಬೇಕು. ಆಚಾರ್ಯರು ಎಲ್ಲ ರೀತಿಯ ಶಾಸ್ತ್ರಗ್ರಂಥಗಳಲ್ಲಿನ ಸಮನ್ವಯವನ್ನು ಸಾಧಿಸಲು ಉದ್ದೇಶಿಸಿದ್ದರೇ ಹೊರತು, ಕೇವಲ ಬ್ರಹ್ಮಸೂತ್ರ ಮತ್ತು ಉಪನಿಷತ್ತುಗಳ ಸಮನ್ವಯವನ್ನಲ್ಲ. ಹೀಗಾಗಿ ಅವರು ವೇದ ಸಂಹಿತೆಗಳು, ಉಪನಿಷತ್ತುಗಳು, ಬ್ರಹ್ಮಸೂತ್ರ, ಪುರಾಣಗಳು, ಸ್ಮೃತಿಗಳು, ಮಹಾಭಾರತ – ಹೀಗೆ ನೂರಾರು ಆಕರಗಳಿಂದ ಉಕ್ತಿಗಳನ್ನು ಆರಿಸಿ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸುತ್ತಾರೆ.

ಆಚಾರ್ಯರದು ಅಗಾಧ ಸ್ಮರಣಶಕ್ತಿ. ಹಾಗೆಯೇ ಅವರು ವೇದ ವಾಙ್ಮಯದಲ್ಲಿ ಪಾರಂಗತರು ಕೂಡ. ಹೀಗಾಗಿ ಅವರು ಇತರರಿಗೆ ತಿಳಿಯದ ಅನೇಕ ವೇದಭಾಗಗಳಿಂದ ಉಕ್ತಿಗಳನ್ನು

ನೀಡಲು ಶಕ್ತರಾಗಿದ್ದರು. ಅವರ ಬುದ್ಧಿಶಕ್ತಿಯ ಅಗಾಧತೆಯು ಸುಮಾರು ಮೂವತ್ತೇಳು ಗ್ರಂಥಗಳ ಸಮೃದ್ಧ ಸಾಹಿತ್ಯವನ್ನು ನಿರ್ಮಾಣ ಮಾಡಿದೆ. ಇವುಗಳನ್ನು ಒಟ್ಟುಸೇರಿ ಆಚಾರ್ಯರ ಸರ್ವಮೂಲ ಗ್ರಂಥಗಳು ಎಂದು ಕರೆಯುತ್ತಾರೆ. ಇದರಲ್ಲಿ ಅವರು ಜಗತ್ತಿನ ಸತ್ಯತ್ವವನ್ನು ಪ್ರತಿಪಾದನೆ ಮಾಡುವುದರ ಜೊತೆಗೆ ನಾರಾಯಣನ ಭಕ್ತಿಯ ಮೇಲೆಯೇ ಕೇಂದ್ರಿತವಾದ ಏಕದೇವತಾವಾದವನ್ನೂ ಪ್ರತಿಪಾದಿಸುತ್ತಾರೆ. ಈಗಾಗಲೇ ಉಲ್ಲೇಖಿಸಿರುವ ಪುಸ್ತಕಗಳಲ್ಲದೆ ಆಚಾರ್ಯರು ಇನ್ನೂ ಹಲವಾರು ಮುಖ್ಯವಾದ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳು ಹೀಗಿವೆ : ೧. **ಗೀತಾ ಭಾಷ್ಯ** ಮತ್ತು ಗೀತೆಯ ವಿಸ್ತೃತ ವಿವರಣೆಯಾದ **ಗೀತಾತಾತ್ಪರ್ಯ** ೨. ಹಲವಾರು ಉಲ್ಲೇಖಗಳನ್ನು ಒಳಗೊಂಡ, ಬಹು ಸಂಕ್ಷಿಪ್ತವಾದ **ಬ್ರಹ್ಮಸೂತ್ರ ಭಾಷ್ಯ**. ೩. **ಅನುವ್ಯಾಖ್ಯಾನ** : ಬ್ರಹ್ಮಸೂತ್ರ ಭಾಷ್ಯಕ್ಕೆ ವಿವರಣಾತ್ಮಕ ವ್ಯಾಖ್ಯಾನ. ಇದರಲ್ಲಿ ಹಲವಾರು ಇತರ ದರ್ಶನಗಳ ವಿಶ್ಲೇಷಣೆ ಮತ್ತು ವಿಮರ್ಶೆಗಳು ಇವೆ. ೪. **ದಶೋಪನಿಷದ್ ಭಾಷ್ಯ** : ಉಪನಿಷತ್ತುಗಳಿಗೆ ದ್ವೈತಸಿದ್ಧಾಂತದ ಆಧಾರದ ಮೇಲೆ ಇಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಶಂಕರರ ಭಾಷ್ಯವು ಅದ್ವೈತ ಪ್ರತಿಪಾದಕವಾಗಿದ್ದು, ಇದು ಅದಕ್ಕಿಂತ ತದ್ವಿರುದ್ಧವಾಗಿದೆ. ಮೇಲಿನವುಗಳನ್ನೆಲ್ಲ ಸೇರಿಸಿಕೊಂಡು, ಹಾಗೆಯೇ ಇನ್ನಿತರ ಸಣ್ಣ ಗ್ರಂಥಗಳನ್ನೂ ಇವಕ್ಕೆ ಕೂಡಿಸಿಕೊಂಡರೆ, ಒಟ್ಟಾರೆ ಮೂವತ್ತೇಳು ಗ್ರಂಥಗಳಾಗುತ್ತವೆ. ಮಧ್ವಾಚಾರ್ಯರು ಹೀಗೆ ತಮ್ಮ ಹಿಂದಿನ ಆಚಾರ್ಯರುಗಳಿಗಿಂತ ಬೃಹತ್ ಪ್ರಮಾಣದ ಸಾಹಿತ್ಯವನ್ನು ಸೃಷ್ಟಿಸಿದ ಕೀರ್ತಿಗೆ ಪಾತ್ರರಾಗುತ್ತಾರೆ. ಆದರೆ ತಮ್ಮ ಬರಹದಲ್ಲಿ ಅವರೆಂದೂ ಆಲಂಕಾರಿಕ ಭಾಷೆಯ ಉಪಯೋಗವನ್ನು ಮಾಡಿಲ್ಲ. ಅನವಶ್ಯಕವಾದ ವಿಶೇಷಣಗಳನ್ನು ಮತ್ತು ಉಪಮಾ ಮುಂತಾದ ಅಲಂಕಾರಗಳನ್ನು ತನ್ನ ಭಾಷಾಶೈಲಿಯಲ್ಲಿ ಬಳಸಿಲ್ಲ. ಇಂಥ ಪ್ರಯೋಗಗಳನ್ನು ನಾವು ಸಂಸ್ಕೃತ ಭಾಷೆಯ ಕಾವ್ಯಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಅವರ ಭಾಷೆ ಯಾವತ್ತೂ ಸೂತ್ರಪ್ರಾಯವಾದುದು; ಅರ್ಥಗರ್ಭಿತವಾದ ಶಬ್ದಗಳಿಂದ ಕೂಡಿದ್ದು.

ಆಚಾರ್ಯರ ಅಪಾರ ಪಾಂಡಿತ್ಯವಾಗಲಿ ಹಾಗೂ ಅವರ ಬುದ್ಧಿಶಕ್ತಿಯಾಗಲಿ, ವಿಷ್ಣುವಿನ ಮೇಲಿನ ಅವರ ಭಕ್ತಿಭಾವಕ್ಕೆ ಎಳ್ಳಷ್ಟೂ ಧಕ್ಕೆಯನ್ನು ತರಲಿಲ್ಲ. ಅವು ಅವರು ನಾರಾಯಣನಲ್ಲಿ ಇಟ್ಟ ಭಕ್ತಿಭಾವಕ್ಕೆ ಯಾವತ್ತೂ ಅಧೀನದಲ್ಲಿದ್ದವು. ಭಕ್ತಿತತ್ತ್ವವನ್ನು ಪ್ರಚಾರಮಾಡುವುದೇ ಆಚಾರ್ಯರ ಜೀವನದ ಪರಮೋದ್ದೇಶವಾಗಿತ್ತು. ಭಕ್ತಿಯ ಬೋಧನೆಗೆ ಅವರು ಪ್ರಾಚೀನ ಗ್ರಂಥಗಳ ಜೊತೆಜೊತೆಗೆ, ಶಂಕರ ಮತ್ತು ರಾಮಾನುಜರ ಕಾಲದಲ್ಲಿ ಇನ್ನೂ ಪ್ರಸಿದ್ಧಿಗೆ ಬಂದಿರದ ಪುರಾಣರತ್ನವಾದ ಭಾಗವತ ಪುರಾಣವನ್ನು ಸಮರ್ಥವಾಗಿ ಬಳಸಿಕೊಂಡರು. ಶಂಕರರು ಮತ್ತು ರಾಮಾನುಜರು ಭಾಗವತ ಪುರಾಣದಿಂದ ಉಲ್ಲೇಖಿಸುವುದಿಲ್ಲ. ಕೇವಲ ವಿಷ್ಣುಪುರಾಣದಿಂದ ಮಾತ್ರವೇ ಉಲ್ಲೇಖಿಸುತ್ತಾರೆ. ಭಾಗವತದ ಅಧ್ಯಯನ ಮತ್ತು ಅದರ ವ್ಯಾಖ್ಯಾನಗಳು ಮಧ್ವಾಚಾರ್ಯ ಪ್ರವಚನ ಕಾರ್ಯಕ್ರಮಗಳಲ್ಲಿ ನಿಯಮಿತವಾಗಿ ನಡೆಯುತ್ತಿತ್ತು. ಆದರೆ ಅವರು ಅಂಕೆಯಿಲ್ಲದ ಮತ್ತು ವಿಪರೀತ ಭಾವುಕತೆಯು ಭಕ್ತಿಯಲ್ಲಿ ಸುಳಿಯುವುದರ ವಿರುದ್ಧ ಎಚ್ಚರಿಕೆ ವಹಿಸುತ್ತಿದ್ದರು. ೧೬೦೦ ಶ್ಲೋಕಗಳನ್ನು ಒಳಗೊಂಡ **ಭಾಗವತ ತಾತ್ಪರ್ಯ** ಎಂಬ ಗ್ರಂಥವನ್ನು ಕೂಡ ಅವರು ರಚಿಸಿದ್ದಾರೆ. ಅದರಲ್ಲಿ ಅವರು ಭಾಗವತವನ್ನು ಸೊಗಸಾಗಿ ಸಂಗ್ರಹಿಸಿದ್ದಾರೆ. ಅವರೊಬ್ಬ ದೊಡ್ಡ ಸಂದೇಶವಾಹಕರು. ಯಾವತ್ತೂ ಭಕ್ತಿತತ್ತ್ವವನ್ನು ಶಿಷ್ಯರಿಗೆ ಮತ್ತು ಭಕ್ತರಿಗೆ ಉಪದೇಶ ಮಾಡುವುದರಲ್ಲಿಯೇ ಕಾಲ ಕಳೆಯುತ್ತಿದ್ದರು. ಇಲ್ಲವೇ ವಿರೋಧಿ ದರ್ಶನಗಳ ಪ್ರತಿನಿಧಿಗಳ ಜೊತೆ ವಾದಮಾಡುತ್ತಿದ್ದರು. ಅಂಥ ಪಂಡಿತರು ಅಕ್ಕಪಕ್ಕದ ಊರುಗಳಿಂದ ಅಥವಾ ಬಹುದೂರದಿಂದ ಬರುತ್ತಿದ್ದರು. ಈ ಬಗೆಯ ಅಸಾಧಾರಣ ಸೇವಾಕಾರ್ಯತತ್ಪರತೆಯೇ ಇತರ ವೈಷ್ಣವ ಆಚಾರ್ಯರುಗಳಿಗಿಂತ ಒಬ್ಬ ಮಹಾನ್ ಸಂನ್ಯಾಸಿಯೆಂದು ಇವರಿಗೆ ಗೌರವ ತಂದುಕೊಟ್ಟಿತು. ತಮ್ಮ ಜೀವಿತಕಾಲದಲ್ಲಿಯೇ ಅವರು ಹಲವಾರು ಶಿಷ್ಯರಿಗೆ ಸಂನ್ಯಾಸದೀಕ್ಷೆಯನ್ನು ನೀಡಿ, ಅವರನ್ನು ತಮ್ಮ ಗ್ರಂಥಗಳಿಗೆ ಟಿಪ್ಪಣಿಗಳನ್ನು ಬರೆಯುವಂತೆ ಪ್ರೋತ್ಸಾಹಿಸಿದರು. ಎಲ್ಲರಿಗೂ ತಮ್ಮ ಸಂದೇಶಗಳನ್ನು ಮುಟ್ಟಿಸುವಂತೆ ಕರೆಕೊಟ್ಟರು. ಅವರ ಶಿಷ್ಯರು ಕೂಡ ಅವರ ಈ ಕಾರ್ಯವನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋದರು. ಕೃಷ್ಣಮಂದಿರದ ಪೂಜೆಗೆ ಅನುವಾಗುವಂತೆ ಎಂಟು ಸಂನ್ಯಾಸಿಗಳನ್ನು ನಿಯಮಿಸಿ, ಎಂಟು ಮಠಗಳನ್ನು ಸ್ಥಾಪಿಸಿದರು. ಅವರೆಲ್ಲ ನಿಯಮಿತ ಕಾಲಾವಧಿ ಕೃಷ್ಣನ ಪೂಜೆ ಮಾಡುವಂತೆ ವಿಧಿಸಿದರು. ಈ ವ್ಯವಸ್ಥೆ ಇಂದಿಗೂ ಯಾವ ಅಡ್ಡಿ ಆತಂಕಗಳಿಲ್ಲದೆ ಸುಸೂತ್ರವಾಗಿ ನಡೆದುಕೊಂಡು ಬರುತ್ತಿದೆ. ಈ ಮೂಲಕ ಅಷ್ಟಮಠದ ಯತಿಗಳು, ಆಚಾರ್ಯರು ೭೦೦ ವರ್ಷಗಳಿಗೂ ಮುಂಚೆ ಬೆಳಗಿಸಿದ ಭಕ್ತಿಯ ಜ್ಯೋತಿಯನ್ನು ಇನ್ನೂ ಕಾಪಾಡಿಕೊಂಡು ಬರುತ್ತಿದ್ದಾರೆ.

## ಮಧ್ವರ ನಂತರ

ಮಧ್ವರ ನಂತರದ ಸಂನ್ಯಾಸಿ ಪರಂಪರೆಯಲ್ಲಿ ಅಪಾರ ಭಕ್ತಿ ಮತ್ತು ಪಾಂಡಿತ್ಯದ ಹಲವಾರು ಮಹಾತ್ಮರು ಹುಟ್ಟಿಬಂದದ್ದು ಆಚಾರ್ಯರ ಸೌಭಾಗ್ಯವೇ ಅನ್ನಬೇಕು. ಈ ಮಹಾನುಭಾವರ ಗ್ರಂಥಗಳ ಮೂಲಕ ಮಧ್ವಸಿದ್ಧಾಂತವು ದೇಶವಿದೇಶಗಳಲ್ಲಿ ವಿದ್ವಾಂಸರ ಮನ್ನಣೆಯನ್ನು ಪಡೆಯಿತು. ಹಾಗೆಯೇ ಅದು ಹಲವಾರು ವೈಷ್ಣವ ಸಂಪ್ರದಾಯಗಳಲ್ಲಿ ಪ್ರಚಲಿತವಿರುವ ಭಕ್ತಿ ಸಾಧನೆಯ ಮೇಲೆ ಪ್ರಭಾವವನ್ನು ಬೀರಿತು. ಅವರಲ್ಲಿ ಮೊದಲನೆಯವರೂ ಮತ್ತು ಬಹುಪ್ರಮುಖರೂ ಆದವರು **ಜಯತೀರ್ಥರು** (೧೩೬೫ –೮೮). ಇವರು ಮಳಖೇಡ ಎಂಬಲ್ಲಿನ ಶ್ರೀಮಂತರ ಪುತ್ರರು. ಅವರು ತಮ್ಮ ಬಾಲ್ಯದಿಂದಲೇ ಮಧ್ವರ ಸಾಕ್ಷಾತ್ ಶಿಷ್ಯರಾದ ಅಕ್ಷೋಭ್ಯತೀರ್ಥರ ಸಂಪರ್ಕಕ್ಕೆ ಬಂದು, ಅವರ ಶಿಷ್ಯರಾದರು. ತಮ್ಮ ಗುರುಗಳ ನಿಧನದ ನಂತರ ಅವರ ಮಠದ

ಮಠಾಧಿಪತಿಗಳೂ ಆದರು. ಅವರ ಅತಿ ಪ್ರಮುಖ ಗ್ರಂಥವೆಂದರೆ **'ನ್ಯಾಯಸುಧಾ.'** ಈ ಗ್ರಂಥವು ಮಧ್ವರ ಅನುವ್ಯಾಖ್ಯಾನದ ವ್ಯಾಖ್ಯಾನವಾಗಿದೆ. ಇದರಲ್ಲಿ ಜಯತೀರ್ಥರು ತಾತ್ತ್ವಿಕ ವಿಚಾರ ಗಳಿಗೆ ಸೂಕ್ತವಾದ ಅತ್ಯಂತ ಉತ್ತಮವಾದ, ಸ್ಪಷ್ಟವಾದ ಮತ್ತು ಸುಂದರವಾದ ಬರಹದ ಶೈಲಿಯನ್ನು ಉಪಯೋಗಿಸಿದ್ದಾರೆ ಎನ್ನು ವುದು ವೈಶಿಷ್ಟ್ಯ. ಇವರ ಬರಹವು ಅವರ ಅನುಪಮವಾದ ಶೈಲಿ ಮತ್ತು ಚಿಂತನೆಯ ಗಂಭೀರತೆಗೆ ದ್ಯೋತಕವಾಗಿದೆ. ಇದು ಅವ ರನ್ನು ಮಧ್ವರ ಸಿದ್ಧಾಂತಕ್ಕೆ ವ್ಯವಸ್ಥಿತ ಚೌಕಟ್ಟನ್ನು ನೀಡುವುದಕ್ಕೆ ಸಹಾಯ ಮಾಡಿತು.

ಮಧ್ವರ ವೈಷ್ಣವ ತತ್ತ್ವವನ್ನು ಸರ್ವಮಾನ್ಯವಾದ ರೀತಿಯಲ್ಲಿ ನಿರೂಪಣೆ ಮಾಡಿದ ಇನ್ನೊಬ್ಬರು ಮಹಾನುಭಾವರೆಂದರೆ **ವ್ಯಾಸ ರಾಯರು** (೧೪೭೮-೧೫೩೯). ಅವರು ಇಂದಿನ ಮೈಸೂರು ನಗರದ ಹತ್ತಿರದಲ್ಲಿರುವ ಬನ್ನೂರಿನಲ್ಲಿ ಜನ್ಮತಾಳಿದರು. ಅವರು ತಮ್ಮ ಬಾಲ್ಯದಲ್ಲಿಯೇ ಇನ್ನೊಬ್ಬ ಮಹಾನ್ ಸಂತರಾದ ಶ್ರೀಪಾದ ರಾಜರ ಶಿಷ್ಯರಾದರು. ಮಾಧ್ವ ವೇದಾಂತವನ್ನು ಆಳವಾಗಿ ಅಧ್ಯ ಯನ ಮಾಡಿದ ವ್ಯಾಸರಾಯರು, ಕಾಂಚೀಪುರಕ್ಕೆ ಹೋಗಿ ಅಲ್ಲಿ ಅದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಕೂಡ ಅಧ್ಯ ಯನ ಮಾಡಿದರು. ಹೀಗೆ ಅವರು ಪಡೆದುಕೊಂಡ ವೇದಾಂತದ ಸರ್ವಾಂಗೀಣ ಪರಿಜ್ಞಾನದ ಫಲವಾಗಿ ಅವರಿಗೆ **ನ್ಯಾಯಾಮೃತ** ಎಂಬ ಅಪೂರ್ವ ಗ್ರಂಥವನ್ನು ಬರೆಯಲು ಸಾಧ್ಯವಾಯಿತು. ಇದು ದ್ವೈತಸಿದ್ಧಾಂತದ ತಾತ್ತ್ವಿಕ ಜಿಜ್ಞಾಸೆಯ ಅಮೂಲ್ಯ ಗ್ರಂಥ. ಇದು ಅದ್ವೈತಿಗಳಲ್ಲಿ ಭಾರೀ ತಲ್ಲಣವನ್ನೇ ಉಂಟುಮಾಡಿತು. ಮಧುಸೂದನ ಸರಸ್ವತಿಯಂತಹ ಉನ್ನತ ದರ್ಜೆಯ ಅದ್ವೈತ ಪಂಡಿತರು ತಮ್ಮ ಮಹತ್ತಾದ ಗ್ರಂಥವಾದ **'ಅದ್ವೈತ ಸಿದ್ಧಿ'**ಯ ಮೂಲಕ, ವ್ಯಾಸರಾಯರು ತಮ್ಮ ಗ್ರಂಥದಲ್ಲಿ ಅದ್ವೈತ ಸಿದ್ಧಾಂ ತದ ವಿರುದ್ಧವಾಗಿ ಎತ್ತಿರುವ ಪ್ರಬಲ ತಾರ್ಕಿಕ ಆಕ್ಷೇಪಣೆಗಳಿಗೆ ಉತ್ತರವನ್ನು ನೀಡುವಂತೆ ಮಾಡಿತು; ಅದ್ವೈತ ಸಿದ್ಧಾಂತದ ಮರುಹೇಳಿಕೆಯನ್ನೇ ತಮ್ಮ ಗ್ರಂಥದಲ್ಲಿ ನೀಡುವಂತೆ ಮಾಡಿತು.

ಹೀಗೆ ಮಧ್ವಸಿದ್ಧಾಂತಕ್ಕೆ ವ್ಯಾಸರಾಯರು ಬಹಳ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಕೇವಲ ಪಂಡಿತರಿಗೆ ಮೀಸಲಾದ ಈ ಕ್ಷೇತ್ರದಲ್ಲಿ ಮಾತ್ರವಲ್ಲ, ಮುಂದೆ ಕರ್ನಾಟಕದಲ್ಲಿ ಪ್ರಸಿದ್ಧವಾದ ಜನಸಾಮಾನ್ಯರ ಭಕ್ತಿ ಆಂದೋಲನವಾದ ದಾಸಕೂಟಕ್ಕೂ ವ್ಯಾಸ ರಾಯರೇ ಪ್ರೇರಕ ಶಕ್ತಿಯಾಗಿದ್ದರು. ತಮಿಳುನಾಡಿನ ಆಳ್ವಾರರ ಭಕ್ತಿಪಂಥದಂತೆಯೇ ಕರ್ನಾಟಕದಲ್ಲಿ ದಾಸಪರಂಪರೆ ಬೆಳೆದು ಬಂತು. ವ್ಯಾಸರಾಯರು ಸ್ವತಃ ಕನ್ನಡದಲ್ಲಿ ಕೀರ್ತನೆಗಳನ್ನು ರಚನೆ ಮಾಡಿದ್ದಲ್ಲದೆ, ಪುರಂದರದಾಸರು ಮತ್ತು ಕನಕದಾಸರಂಥ ವಿಭೂತಿಪುರುಷರನ್ನು ಬೆಳಕಿಗೆ ತಂದರು. ಅವರಿಬ್ಬರೂ ಈ ದಾಸ ಕೂಟದ ಮಹಾನ್ ನೇತಾರರು ಎನಿಸಿಕೊಂಡವರು. ಪುರಂದರ ದಾಸರು ಸಂಗೀತಜ್ಞರು. ಸಾವಿರಾರು ಕೀರ್ತನೆಗಳನ್ನು ರಚಿಸಿ ಮಧ್ವರಿಂದ ಪ್ರವರ್ತಿತವಾದ ಭಕ್ತಿಯ ಬೆಳಕು ಪ್ರಜ್ವಲಿಸುವಂತೆ ನೋಡಿಕೊಂಡಿದ್ದಾರೆ. ಕನಕದಾಸರು ಕುರುಬ ಜನಾಂಗಕ್ಕೆ ಸೇರಿ ದವರು. ಇಷ್ಟಾದರೂ ವ್ಯಾಸರಾಯರ ಉದಾರ ಮನೋಭಾವ ಅವರನ್ನು ಶಿಷ್ಯನನ್ನಾಗಿ ಸ್ವೀಕರಿಸಿತು. ನೈಜ ಭಕ್ತಿಯಲ್ಲಿ ಹುಟ್ಟು ಮತ್ತು ಕುಲಭೇದಗಳಿಗೆ ಅವಕಾಶವಿಲ್ಲವೆಂಬ ಸತ್ಯವನ್ನು ಸಾಬೀತು ಪಡಿಸಿತು. ಕನಕದಾಸರ ಕೀರ್ತನೆಗಳು ದಾಸಕೂಟದ ಉದಾರ ಭಾವದ ದ್ಯೋತಕಗಳಾಗಿವೆ ಎಂದು ಹೇಳಬಹುದು. ಇವರಿಬ್ಬರ ಮತ್ತು ಇನ್ನೂ ಹಲವು ದಾಸವರೇಣ್ಯರ ಕೀರ್ತನೆಗಳು ಮತ್ತು ಗ್ರಂಥಗಳು ಮಹಾರಾಷ್ಟ್ರದ ಭಕ್ತಿ ಸಂಪ್ರದಾಯದ ಮೇಲೆ ಪ್ರಭಾವ ಬೀರಿತು. ಅಲ್ಲಿನ ಭಕ್ತಿ ಪಂಥವು ಪಂಡರಾಪುರದ ವಿಠ್ಠಲ ದೇವರನ್ನೇ ಕೇಂದ್ರಬಿಂದುವಾಗಿ ಹೊಂದಿತ್ತು.

ಹಲವಾರು ವರ್ಷಗಳ ನಂತರ ಮಧ್ವರ ವೈಷ್ಣವ ಸಿದ್ಧಾಂತವು ಬಂಗಾಳದ ಗೌಡೀಯ ಆಂದೋಲನಕ್ಕೆ ಸ್ಫೂರ್ತಿಯನ್ನು ನೀಡಿತು. ಬಲಭದ್ರನು ಗೌಡೀಯ ಸಿದ್ಧಾಂತದ ಪ್ರಕಾರ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಿದನು. ಅದರಲ್ಲಿ ಮಧ್ವರ ದ್ವೈತಸಿದ್ಧಾಂತದ ಅನೇಕ ತತ್ತ್ವಗಳನ್ನು ತನ್ನ ಚಿಂತನೆಯಲ್ಲಿ ಅಳವಡಿಸಿಕೊಂಡನು.

*(ಮುಗಿಯಿತು)*

## ಶಿವಸ್ತುತಿ



**ಏಕೈಶ್ವರ್ಯೇ ಸ್ಥಿತೋಽಪಿ ಪ್ರಣತಬಹುಫಲೇ ಯಃ ಸ್ವಯಂ ಕೃತ್ತಿವಾಸಾಃ**
**ಕಾಂತಾಸಂಮಿಶ್ರದೇಹೋಽಪ್ಯವಿಷಯಮನಸಾಂ ಯಃ ಪರಸ್ತಾದ್ಯತೀನಾಂ ।**
**ಅಷ್ಟಾಭಿರ್ಯಸ್ಯ ಕೃತ್ಸ್ನಂ ಜಗದಪಿ ತನುಭಿರ್ಬಿಭ್ರತೋ ನಾಭಿಮಾನಃ**
**ಸನ್ಮಾರ್ಗಾಲೋಕನಾಯ ವ್ಯಪನಯತು ಸ ವಸ್ತಾಮಸೀಂ ವೃತ್ತಿಮೀಶಃ ॥**

ನಮಸ್ಕರಿಸಿ ಆಶ್ರಯಿಸಿದವರಿಗೆ ಬೇಕಾದಷ್ಟು ಫಲ ನೀಡುವ ಸಂಪತ್ತಿದ್ದರೂ ತಾನು ಕೇವಲ ಚರ್ಮವನ್ನೇ ಉಟ್ಟಿದ್ದಾನೆ. ಪಾರ್ವತಿಗೆ ಅರ್ಧಶರೀರವನ್ನು ಹಂಚಿ ದ್ದರೂ, ಜಿತೇಂದ್ರಿಯರಾದ ಯತಿಗಳೆಲ್ಲರಿಗೂ ಶ್ರೇಷ್ಠನಾಗಿದ್ದಾನೆ. ಚಂದ್ರ, ಸೂರ್ಯ, ಅಗ್ನಿ, ಗಾಳಿ, ನೆಲ, ಜಲ, ಆಕಾಶ, ತನ್ನ ಶಕ್ತಿ — ಎಂಬ ಎಂಟು ಅಂಶಗಳಿಂದ ಜಗತ್ತನ್ನು ರಕ್ಷಿಸುತ್ತಿದ್ದರೂ ಅವನಿಗೆ ಅಭಿಮಾನವಿಲ್ಲ. ಆ ಈಶ್ವರನು ಮೋಕ್ಷಮಾರ್ಗ ವನ್ನು ಕಾಣಲು ಅನುಕೂಲವಾಗುವಂತೆ ನಮ್ಮ ತಮಸ್ಸನ್ನು ಹೋಗಲಾಡಿಸಲಿ.

*— ಕಾಳಿದಾಸ ('ಮಾಳವಿಕಾಗ್ನಿಮಿತ್ರ'ದಲ್ಲಿ)*